"SATYAVADI" Founded 1917 Regd. No. M. 1299

ಸತ್ಯವಾದಿ

(ಅರವಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 24] ಶುಕ್ರವಾರ 12—10—45 [ಬಿಡಿ ಪ್ರತಿ 3 ಪೈ

123(2)

ಪ್ರಜಾಪ್ರತಿನಿಧಿ ಸಭೆ

(ನಮ್ಮ ಬಾಸಕ ಪ್ರತಿನಿಧಿಯಿಂದ)

ಮೈಸೂರ, ಅ 12

ಮೂರನೆಯ ದಿವಸದ ಪ್ರತಿನಿಧಿ ಸಭೆಯ ಕಾರ್ಯಕ್ರಮಗಳು ಈ ದಿವಸ 12 ಘಂಟೆಗೆ ಪ್ರಾರಂಭವಾದವು. ಪ್ರಧಾನ ಶಿರೋಮಣಿ ನ್ಯಾಯಮೂರ್ತಿ ನಾರಾಯಣರಾಯರ ಗೈರು ಹಾಜರಿಯಲ್ಲಿ ಮಿ॥ ಓಬಳವಾಡಿ ಪುಲ್ಲಾರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು. ಪ್ರಶ್ನೋತ್ತರಗಳಿಂದ ಸಭೆ ಕಾರ್ಯಾರಂಭವನ್ನು ಮಾಡಿತು.

ಇಂಜಿನಿಯರಿಂಗ್ ಶಾಖೆಗೆ ಸಂಬಂಧಿಸಿದ ನೌಕರಿ ವಿಷಯಗಳ ಮೇಲೆ ಪ್ರಶ್ನೋತ್ತರಗಳು ಪ್ರಾರಂಭವಾದವು ಶ್ರೀ ಕೆ. ಡಿ ಜೋಯಿಸರವರು ಉತ್ತರವಿತ್ತರು.

ಪಾವಗಡರವರ ಸವಾಲ್

'ನೌಕರಿ ಕೊಡುವಾಗ ಗಂಧಾಕ್ಷತೆ ಲಿಂಗ ಇತ್ಯಾದಿಗಳನ್ನು ಪರೀಕ್ಷಿಸಿ ಕೊಡಲಾಗುವುದೇ ?' ಎಂದಾಗ ಶ್ರೀ ಪಾವುಗಡ ನಂಜುಂಡರಾಯರು ಸರ್ಕಾರಕ್ಕೆ ಸವಾಲ್ ಹಾಕಿದರು.

ಕ್ರಿಯಾಲೋಪಗಳ ಉದ್ಭವ

'ಕೋಮುವಾರುಗಳ ಮೇಲೆ ಮಾತನಾಡಕೂಡದು, ಸ್ವಾಮಿ ಎಂದು ಕೆಲವು ಸದಸ್ಯರುಗಳು ಕ್ರಿಯಾಲೋಪವನ್ನು ಉದ್ಭವ ಮಾಡಿದರು.

ಅಧ್ಯಕ್ಷರಿಗೆ ದೂರು

'ಸ್ವಾಮಿ, ಬೇರೆ ಏನೂ ಸೇರಿಸಿದ್ದಲ್ಲ ಎಂಬುದಾಗಿ ಕಾರ್ಯದರ್ಶಿರವರು ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡುತ್ತಾರೆ. ಮಂತ್ರಿಮಹೋದಯರುಗಳೇ ಉತ್ತರವನ್ನು ದಯಪಾಲಿಸಬೇಕು' ಎಂಬುದಾಗಿ ಕೆಲವು ಸದಸ್ಯರುಗಳು ಅಧ್ಯಕ್ಷರವರೆಗೆ ದೂರುತಂದರು. ಅನಂತರ ಹಲವು ಪ್ರಶ್ನೆಗಳಿಗೆ ಮಿ॥ ಸಿದ್ದಯ್ಯನವರು ಉತ್ತರಿಸುತ್ತರು.

ಪ್ರಶ್ನೋತ್ತರ ಕಾಲ ಮುಗಿಯಿತು

'1-5 ಗಂಟೆ; ಪ್ರಶ್ನೋತ್ತರ ಕಾಲ ಮುಗಿಯಿತು' ಎಂಬುದಾಗಿ ಶ್ರೀ ಶಾಮಯ್ಯಂಗಾರವರು ಕ್ರಿಯಾಲೋಪವನ್ನು ತೆದರು. ಮಿ॥ ಪುಲ್ಲಾರೆಡ್ಡಿಯವರು ಅದಕ್ಕಾಗಿ ಸಂದಿಸಿದರು.

ಹಳೇ ರೋಗಕ್ಕೆ ಔಷಧಿ ಕೊಡಿ

ಕಾಂಗ್ರೆಸ್ ಪಕ್ಷದ ಶ್ರೀ ಕೃಷ್ಣಮೂರ್ತಿ ಮತ್ತಿತರು ಕಳೆದ ದಿನದ ಮಂಡಿಸಿದ್ದ ಪ್ರಿವಿಲೇಜ್ ಮೋಷನ್ನನ್ನು ಪರಿಶೀಲಿಸಿ ಉತ್ತರ ಕೊಡಬೇಕೆಂದು ಕೇಳಿದ್ದನ್ನು ಶ್ರೀ ಗುಪ್ತರು ಕೇಳಿದರು. ಶ್ರೀ ಗುಪ್ತರು ಮಾತನಾಡುತ್ತಿದ್ದಾಗ ಶ್ರೀ ನಂಜುಂಡರಾಯು ಕ್ರಿಯಾಲೋಪವಿದೆ ಹೇಳಿ ಬಯಿಸತ್ತೇನೆ ಎಂಬುದಾಗಿ ಅಬ್ಬರಿಸಿ ನಿಂತರು. ಮತ್ತೊಬ್ಬ ಸದಸ್ಯರು ಇಬ್ಬರು ಸದಸ್ಯರು ಒಟ್ಟಿಗೆ ನಿಂತಿರುವುದು ತಪ್ಪೆಂದು ಕ್ರಿಯಾಲೋಪವನ್ನು ತಂದರು. 'ಸಲ್ಲುವವರ ಸಂಖ್ಯೆ ಹೆಚ್ಚು ಒಕ್ಕದೊದು ಭಯವಾಗಿದೆ' ಎಂದರು ಅಧ್ಯಕ್ಷರು. ಸಭೆಯಲ್ಲಿ ನಗೆಯು ನರ್ತನ ಮಾಡಿತು.

ಅಧ್ಯಕ್ಷರ ಸಮಾಧಾನ

'ತದನಂತ್ತರ ಕಾರ್ಯವಿದ್ದಾಗ ಸಭೆಯನ್ನು ಮುಕ್ತಾಯಗೊಳಿಸಬೇಕೆಂದು ಕೋರಿದರೆ ಅದು ನಡೆಸಲ್ಪಡದಿರಬಹುದು. ಈ ರೀತಿ ಕೇಂದ್ರ ಸಭೆಗಳಲ್ಲಿ ನಡೆದಿದೆ' ಎಂಬುದಾಗಿ ಅಧ್ಯಕ್ಷರು ತಿಳಿಸಿದರು.

ರದ್ದಾವು ನಿರಾಕರಿಸಲ್ಪಟ್ಟಿತು

ಶ್ರೀ ಜೋಯಿಸ್ ಮತ್ತು ಶ್ರೀ ಶಾಮರಾಜಯ್ಯಂಗಾರರಿಂದ ರಾಜಧಾನಿ ಸಿಯಲ್ಲಿನ ಪ್ರತಿಬಂಧಕಾಜ್ಞೆ ಬಗ್ಗೆ ಮಂಡಿಸಲ್ಪಟ್ಟಿದ್ದ ರದ್ದಾವು ನಿರಾಕರಿಸಲ್ಪಟ್ಟಿತು.

ಮಸೂದಾ ಕಾನೂನುಗಳು

ಸಂಸ್ಥಾನ ಜೀವವಿಮೆ ತಿದ್ದುಪಡಿ ಕಾನೂನು ಅಂಗೀಕಾರವಾಯಿತು

ಮೈಸೂರು ವರಮಾನ ತೆರಿಗೆ ಮೇಲೆ ವಿಸರ್ತಿತ ಚರ್ಚೆಯಾಗಿ 110-80 ಮತಗಳಿಂದ ಪರಾಜಯವಾಯಿತು.

(ಹಿಂದಿನ ಪುಟದಿಂದ ಮುಂದುವರಿದುದು)

ಮಸೂದಾ ಕಾನೂನುಗಳು

ಮೋಟಾರು ವಾಹನದ ತಿದ್ದುಪಡಿ ಮಸೂದೆಯು ಪರವಾಗಿ ಶ್ರೀ ಪಾವುಗಡ ನಂಜುಂಡರಾಯರು ಮಾತಾಡಿದರು. ಕಾಂಗ್ರೆಸ್ ಮತ್ತು ಭೂಪಾಳಂ ಇವನ್ನು ವಿರೋಧಿಸಿದರು. ಈ ಮಸೂದೆ ಅಧಿಕ ಮತದಿಂದ ಅಂಗೀಕೃತವಾಯಿತು.

ಸರ್ಕಾರದ ಮೇಲಿನ ಕೋರ್ಟ್ ವ್ಯವಹಾರ ಕಾಂಗ್ರೆಸ್ ಪಕ್ಷದಿಂದ ವಿರೋಧಿಸಲ್ಪಟ್ಟು, ಬಹುಮತಾಂಗೀಕೃತವಾಯಿತು.

ಅಧಿಕಲಾಭ ಕರದ ಮಸೂದೆಗೆ 80-133 ಮತಗಳಿಂದ ಅಸಜಯವಾಯಿತು.

ಮೈಸೂರು ಜೀವವಿಮೆ ಇಲಾಖೆ ತಿದ್ದುಪಡಿ ಮಸೂದೆ ಮೇಲೆ ಚರ್ಚೆಯು ಪ್ರಾರಂಭವಾಗಿದೆ.

ಜಾವಾದಲಿ ಸಾಮೂಹಿಕ ಚಳವಳಿ

—ಜಾವಾದಲ್ಲಿ ಸಾಮೂಹಿಕ ಚಳವಳಿ ಪ್ರಾರಂಭವಾಗಿದೆ. ದೇಶಭಕ್ತರು ಬಟಾವಿಯಾ ಬಿಟ್ಟು ದ್ವೀಪವನ್ನೆಲ್ಲಾ ಆಕ್ರಮಿಸಿರುವರು.

o o

—ಸಂ ॥ ನೆಹರೂರವರು ಜಾವಾಕ್ಕೆ ಹೋಗಲು ವಾಹನ ಸೌಕರ್ಯಕ್ಕಾಗಿ ಭಾರತ ಸರಕಾರವನ್ನು ಕೇಳಿರುವರು.

o o

ಶ್ರೀ ಜವಹರಲಾಲರ 'ಲೆಟರ್ಸ್ ಆಫ್ ಎ ಫಾದರ್ ಟು ಹಿಸ್ ಡಾಟರ್' ಎಂಬ ಪುಸ್ತಕವನ್ನು ಶಾಲಾ ಪಠ್ಯ ಪುಸ್ತಕವಾಗಿಡಬಹುದೆಂದು ಮದರಾಸು ಸಮಿತಿಯುವರು ತೀರ್ಮಾನಿಸಿದಾರೆ.

o o

—ಇಂದೂರಿನ ರಾಜಕೀಯ ಖೈದಿ ಶ್ರೀ ಶಂಬು ದಯಾಳರು 77 ದಿವಸಗಳಿಂದ ನಿರಶನ ವ್ರತವನ್ನಾಚರಿಸುತ್ತಿರುವರು. ಸ್ಥಿತಿ ಚಿಂತಾಜನಕವಾಗಿದೆ.

o o

—ಬ್ರಿಟನ್ ಮತ್ತು ಈಜಿಪ್ಟಿಗೆ 1936 ರಲ್ಲಾಗಿರುವ ಒಪ್ಪಂದದಂತೆ, ಅಣುಬಾಂಬಿನ ರಹಸ್ಯವನ್ನು ಈಜಿಪ್ಟಿಗೂ ತಿಳಿಸಬೇಕೆಂದು ಅಲ್ಲಿಯ ಮಾಜಿ ಮಂತ್ರಿಗಳೊಬ್ಬರ ಅಭಿಪ್ರಾಯ.

AT Opera—

From 10–10–45

ರಂಜಿತ್, ಟಿ ಆರ್, ರಾಜಕುಮಾರಿ

ಕೆ. ಎಲ್. ವಿ. ವಸಂತ,

ಕೃಷ್ಣ, ಮಧುರಂ ಪಾತ್ರವಹಿಸಿರುವ

ಶಾಲಿವಾಹನ

(ತಮಿಳು)

Morning Shows

From 11-10-45

Tarzan Triumphs

ನ್ಯೂ ಕೃಷ್ಣ ಟಾಕೀಸ್

ಮಾರ್ನಿಂಗ್ ಷೋ

ತಾ 11—10—45 ರಿಂದ

"ಬಾಳಾಜಿ"

— ಅಥವಾ —

ತಿರುಪತಿ ವೆಂಕಟೇಶ ಮಹಾತ್ಮೆ

No. R-1-60/45-46

ಮೈಸೂರು ಸಿಟಿ ರೇಷನಿಂಗ್

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋಗಳೂ ಮೊಹಲ್ಲಾ ಸಬ್ ಗೋದಾಮುಗಳೂ ಮತ್ತು ಇತರೇ ರೇಷನ್ ಡಿಪೋಗಳೂ ಸಹ ಇದೇ ಅಕ್ಟೋಬರ್ ಮಾಹೆ 15 ನೇ ತಾರೀಖು ಸೋಮವಾರ ಮತ್ತು 16 ನೇ ತಾರೀಖು ಮಂಗಳವಾರ ಮಧ್ಯಾಹ್ನ ಮಾತ್ರ 'ಮಹಾನವಮಿ' ಮತ್ತು 'ವಿಜಯದಶಮಿ' ಸ್ಯಾಂಕ್ಷನ್ ಮುಚ್ಚಲ್ಪಡುತ್ತವೆ

ದಸರಾ ಕಾಲದಲ್ಲಿ ಮಂಗಳವಾರ ಬೆಳಿಗ್ಗೆ ಮತ್ತು ಗುರುವಾರ ಮಧ್ಯಾಹ್ನ ಎಲ್ಲಾ ಡಿಪೋಗಳಿಗೂ ಇದ್ದ ನಮೂನೆ ಮೂಲು ರಜವನ್ನು ನಿಲ್ಲಿಸಿರುತ್ತೆ.

(ಸಹಿ) ಟಿ. ವಿ. ರೆಡ್ಡಿ

4—10—45 ರೇಷನಿಂಗ್ ಆಫೀಸರ್

ಮೈಸೂರು ಸಿಟಿ

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಪ್ರಜಾಪ್ರತಿನಿಧಿಸಭೆಯ ಕಾರ್ಯಕಲಾಪಗಳು

ಮೈಸೂರು, ಆ 11 — ಪ್ರಜಾ ಪ್ರತಿನಿಧಿ ಸಭೆಯ ದಸರಾ ಸಮಾನೇ ಶದ ದ್ವಿತೀಯ ದಿನಸದ ಕಾರ್ಯಕ್ರಮಗಳು 12 ಗಂಟೆಗೆ ಪ್ರಧಾನ ತಿರೋಮಣಿ ನ್ಯಾಯಮತಿ ಮಾಧವರಾಯರ ಅಧ್ಯಕ್ಷತೆಯಲ್ಲಿ, ಪ್ರಶ್ನೋತ್ತರ ಕಾರ್ಯಕ್ರಮಗ ಳಿಂದ ಬಿಳೆಯಿತು.

ಅತಿಥಿಗಳ ಪೀಠದಲ್ಲಿ ಶಾಸನ ಸಭಾಧ್ಯಕ್ಷರಾದ ರಾಜಮಂತ್ರ ಪ್ರವೀಣ ಹೆಚ್. ಬಿ. ಗುಂಡಪ್ಪಗೌಡರು ಮಂಡಿಸಿದ್ದರು.

ಮಾಜೀ ಶಾಸನ ಸಭಾಧ್ಯಕ್ಷರಾದ ಶ್ರೀ ಡಿ. ಹೆಚ್, ಚಂದ್ರಶೇಖರಯ ನವರು ಸಭೆಯಲ್ಲಿ ಭಾಗವಹಿಸಿದ್ದರು.

ಪ್ರಶ್ನೋತ್ತರಗಳು

ಶ್ರೀ ವಿಾರ್'ನೂರ್ ಹುಸೇನ್'ರವರು ಕೋರಿದ್ದ ಉತ್ತರಗಳಿಗೆ, ಶ್ರೀ ಮ ಲ್ಲಾರಾಧ್ಯರು ಉತ್ತರಕೊಡ ತ್ತಾ ' ಮೈಸೂರಿನಲ್ಲಿರುವ ಮಹರಾಣಿ ಕಾಲೇಜ್ಯು ಫುಲ್'ಗ್ರೇಡ್' ನ ಹಿಳಾ ಕಾಲೇಜ್ ಆಗುವಂತೆ ಸರ್ಕಾರ ತೀರ್ಮಾನಿಸಿಲ್ಲ. ಈ ತೀರ್ಮಾನವು ಸರ್ಕಾರದ ಮನಸ್ಸಿನಲ್ಲಿ ಇಲ್ಲದಿರುವುದರಿಂದ ಕಟ್ಟಡ ಅನುಕೂಲ ತೆ, ಉಪಾಧ್ಯಾಯರುಗಳ ಅರ್ಹತೆ, ಮುಂತಾದವುಗ ನ್ನು ಗಮನಿಸಿಲ್ಲ ' ಎಂದರು

ಉಪ ಪ್ರಶ್ನೆಗಳು

ಪ್ರ ವಿಶ್ವವಿದ್ಯಾನಿಲಯವೇನಾದರೂ ಮಹರಾಣಿ ಕಾಲೇಜನ್ನು ಫುಲ್ ಗ್ರೇಡ್' ಕಾಲೇಜನ್ನಾಗಿ ಪರಿವರ್ತಿಸಲು ಇಚ್ಛೆಯನ್ನೇನಾದರೂ ಪಟ್ಟಿದೆಯೇ ? ಉ ಹೇಳಲು ಸಾಧ್ಯವಿಲ್ಲ. ಪ್ರ ಸೆನೆಟ್'ನಿಂದ ಕೇಳಿಕೆಯೇನಾದರೂ ಬಂದಿದೆ ಯೇ ? ಉ ಹೇಳಲು ಸಾಧ್ಯವಿಲ್ಲ. ವಿದ್ಯಾರ್ಥಿನಿಯರೇನಾದರೂ ಧಿಕ ಸಂ ಖ್ಯಾತರಾದರೆ ಸರ್ಕಾರವು ಫುಲ್'ಗ್ರೇಡ್' ಕಾಲೇಜನ್ನು ಕೊಡುವುದೇ ? ಉ ಭಾಷೆ ಕೊಡಲು ಸಾಧ್ಯವಿಲ್ಲ. ಪ್ರ ಹಾಸ್ಟಲ್ ಪ್ರಯೋಜನವು ಅಸ ಮರ್ಪಕವಾಗಿರುವುದು ಗಮನಿಸಲ್ಪಟ್ಟಿದೆಯೇ ? ಉ ಈ ಪ್ರಶ್ನೆ ಹುಟ್ಟವುದಿಲ್ಲ

ಶ್ರೀಮಾನ್ ಎಂ.ಬಿ. ಮಹದೇವಪ್ಪನವರ ಪ್ರಶ್ನೆಗಳಿಗೆ ಶ್ರೀ ಮಲ್ಲಾರಾಧ್ಯ ಉತ್ತರಕೊಡುತ್ತಾ ನಿರ್ಬಂಧಕ ಪ್ರಾಥಮಿಕ ವಿದ್ಯಾಭ್ಯಾಸವನ್ನು ಸಾರ್ವತ್ರಿಕವಾ ಗಿ ಕೂಡಲೇ ಜಾರಿಗೆ ತರಬೇಕೆಂಬ ಉದ್ದಿಶ್ಯ ಸರ್ಕಾರದ ಗಮನದಲ್ಲಿಲ್ಲ. ಈ ಬಗ್ಗೆ ಯಾವ ಯೋಜನೆಯೂ ಇಲ್ಲ. ಇದಕ್ಕಾಗಿ ಹಣದ ವಂಜೂರಾತಿಯಾ ಗಿಲ್ಲ ' ಎಂಬುದಾಗಿ ತಿಳಿಸಿದರು.

ಉಪ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಶ್ರೀ ಮಲ್ಲಾರಾಧ್ಯರು ' ಆರ್ಥಿಕ ಮತ್ತು ವ್ಯವಹಾರ ತೊಂದರೆಯಿಂದ ಈ ಯೋಜನೆಯನ್ನು ಮಾಡಿಲ್ಲ. ಇ ದೇ ಉದ್ದೇಶದಿಂದ ಕೂಡಿದ ಜೀರೆ ಸರ್ವಾಡನ್ನು ಸರ್ಕಾರ ಮಾಡಿದೆ ಪ್ರತಿ ವರ್ಷವೂ 300-400 ಶಾಲೆಗಳವರೆಗೆ ತೆರೆಯಲಾಗುತ್ತಿದೆ. ಇದುವರೆವಿಗೆ 1600 ಶಾಲೆಗಳನ್ನು ತೆರೆಯಲಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ನಾಲ್ಕು ವರ್ಷ ಗಳ ಕಾಲ ವಿದ್ಯಾಭ್ಯಾಸ ಮಾಡಲೇ ಬೇಕೆಂದು 1941 ರಿಂದ ಜಾರಿಮಾಡಲಾಗಿದೆ ಮಧ್ಯದಲ್ಲಿ ಏನಾದರೂ ವಿದ್ಯಾಭ್ಯಾಸ ನಿಂತರೆ ತಂದೆತಾಯಿಗಳಿಗೆ ಜುಲ್ಮಾನೆಹಾ ಕಲಾಗುವುದು. ಇದನ್ನು ಹತ್ತು ವರ್ಷದ ಯೋಜನೆಯಲ್ಲಿ ಸಿರೂಪಿಸಿದೆ ' ಎಂ ದು ಹೇಳಿದರು.

ಗೋಮಟೇಶ್ವರ ವಿಗ್ರಹವನ್ನು ಕುರಿತು ಶ್ರೀ ಮಲ್ಲಾರಾಧ್ಯರು ಉತ್ತರಕೊ ಡುತ್ತಾ ' ಗೋಮಟೇಶ್ವರ ವಿಗ್ರಹದ ರಕ್ಷಣೆ ಸಮಿತಿಗೆ ಒಪ್ಪಿಸಲಾಗಿದೆ. ಸಧ್ಯ ದಲ್ಲಿ ಅದಕ್ಕೆ ಅಪಾಯವೇನೂ ಆಗಲಾರದು. ಕೇಂದ್ರ ಸರ್ಕಾರದಿಂದ ಉತ್ತರ ಬಂದ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಮುಜ್ರಾಯಿ ಕ ಮಿಷನರು ಈ ಸಮಿತಿ ಅಧ್ಯಕ್ಷರು '

ಅವಸರದ ತರಾವು

ನಾಳೆಯ ದಿವಸ ಚಿತ್ರದುರ್ಗ, ಚನ್ನಗಿರಿ ಅಪಾರ ಸಮಸ್ಯೆಯನ್ನು ಕುರಿ ತು ಚರ್ಚಿಸಲಾಗುವುದು.

ಮೈಸೂರು ಸಿಟಿ ಮುನಿಸಿಪಾಲಿಟಿ

ಸಿಟಿ ಮಾರ್ಕೆಟ್'
ಪ್ರದರ್ಶನ

ತಾ 13-10-1945

ಶನಿವಾರ ಬೆಳಿಗ್ಗೆ 8-30 ಘಂಟೆಯಿಂದ 12 ಘಂಟೆಯವರಿಗೆ ದೇವರಾಜ ಮಾರ್ಕೆಟ್ ಬಿಲ್ಡಿಂಗ್‌ನಲ್ಲಿ ನಡೆಯುವುದು.

ಪ್ರವೇಶ : ಟಿಕೀಟು ಮೂಲಕ

0-2-0

ಉತ್ತಮ ಪ್ರದರ್ಶನಗಳಿಗೆ
ಒಳ್ಳೆಯ ಬಹುಮಾನಗಳು.

ವಿವರಗಳನ್ನು ಮುನಿಸಿಪಲ್ ಆಫೀಸಿನಲ್ಲಿಯೂ, ದೇವರಾಜ ಮಾರ್ಕೆಟ್ ಆಫೀಸಿನಲ್ಲಿಯೂ ತಿಳಿಯಬಹುದು.

(ಸಹಿ) ಆರ್. ರಾಮಚಂದ್ರರಾವ್ ಬಾಂಭೋರೆ,
ಪ್ರೆಸಿಡೆಂಟ್.

ಸತ್ಯವಾದಿ
ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇ ಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0

ಆ ಮ ಶ ಂ ಕೆ
ಅ ತಿ ಸಾ ರ ಗ ಳಿ ಗೆ
.... ಖಾತ್ರಿ....
ಗುಣಕಾರಿಯಾದ
ಡಿಸೆಂಟಿಸೆಡ್
ಲ
ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತೆ.
— ಸ್ಟಾಕಿಸ್ಟರು —
ರಘುಲಾಲ್ ಅಂಡ್ ಕೊ.
ಟಿ. ಸಿ. ನಟರಾಜ್ ಅಂಡ್ ಕೊ.
— ಹಂಚುವವರು —
ಕಾಂತರಾಜ್ ಅಂಡ್ ಕೊ.
ರವೇ ಬೀದಿ, ಮೈಸೂರು.

At Ranjit
Humayun
5 ನೇ ವಾರ
ರಣಜಿತ್ ಟಾಕೀಸಿನಲ್ಲಿ
.... ಹುಮಾಯೂನ್....
(ಹಿಂದಿ)
ಅಶೋಕ ಕುಮಾರ್, ಜಂದ್ರಮೋಹನ್
ವೀಣಾ, ಸರ್ದಿಸ್, ಷಾ ನವಾಸ್
ಪಾತ್ರವಹಿಸಿರುವರು

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್,
ಮೈಸೂರು.

ಹರಾಜು ನೋಟೀಸ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ : —

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿಗೆ ಸೇರಿದ ಕೆಲವು ಅತ್ಯುತ್ತಮವಾದ ಬಂಗ್ಲಾ ಸೈಟುಗಳನ್ನು ತಾರೀಖು 12-9-1945 ನೇ ಹರಾಜು ಇಸ್ತಿಹಾರ್‌ನಾಮೆಯ ಷರತ್ತು ಪ್ರಕಾರ ತಾರೀಖು 20-10-1945 ರಿಂದ 23-10-1945 ರ ವರೆಗೆ ಸೈಟುಗಳ ಬಳಿ ಒಳಾಂಗವಾಗಿ ಹರಾಜು ನಡಾಡಲಾಗುತ್ತೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

(ಸಹಿ) ಆರ್. ರಾಮಚಂದ್ರರಾವ್ ಬಾಂಭೋರೆ
ಛೇರ್ಮನ್